ಕೂಡಿ ಕಳೆದು ಗುಣಿಸಿ ಭಾಗಿಸಿ ತುಲನೆ ಮಾಡಿ ಇಡೀ ಜಗತ್ತಿಗೇ ಬೆಳಕು ಬೀರಬಲ್ಲಂಥ ಮಹಾಪುರುಷನೊಬ್ಬನ ಬೀಜಾಂಕುರ ನನ್ನ ಉದರದಲ್ಲಿ ಆಗಿರಬಹುದು ಎಂಬ ನಿರ್ಣಯಕ್ಕೆ ಬಂದರು. ನಾನಾದರೋ ಅವರ ಸಮರ್ಥನೆಯನ್ನು ನಂಬಿದಂತೆ ನಟಿಸಿದರೂ, ನನ್ನೊಳಗೆ ಕುಡಿಯೊಡೆದಿರುವ ಯಾವ ಲಕ್ಷಣವೂ ಇನ್ನೂ ಗೋಚರಿಸಿರಲಿಲ್ಲ. ಎಷ್ಟೋ ವರ್ಷಗಳಿಂದ ಶುದ್ಧೋದನರ ಸಂಯೋಗವನ್ನು ನಾನು ಹೊಂದಿದ್ದರೂ, ಈವರೆಗೂ ಮುಟ್ಟು ನಿಂತಿರಲಿಲ್ಲ. ಹಾಗಾಗಿ ಅವರ ಭವಿಷ್ಯವಾಣಿಯಿಂದ ಸ್ವಾಭಾವಿಕವಾಗಿ ಖುಷಿಯಾದರೂ ತಿಂಗಳ ಅಂತ್ಯದವರೆಗೆ ಕಾಯದೇ ಸಂಭ್ರಮಿಸುವಂತಿರಲಿಲ್ಲ. ಒಳಗೊಳಗೇ ಇದ್ದ ಭಯಮಿಶ್ರಿತ ಸಂತೋಷದೊಂದಿಗೆ ತಿಂಗಳು ಕಳೆದೆ. ಮಾಸಿಕ ಸ್ರಾವದ ಯಾವ ಲಕ್ಷಣಗಳೂ ಕಾಣದಿದ್ದುದರಿಂದ ಹಾಗೂ ಭವಿಷ್ಯಕಾರರು ಮಹಾಪುರುಷನೆಂದು ಬೇರೆ ಹೇಳಿದ್ದರಿಂದ ಗಂಡು ಮಗುವೇ ಜನಿಸುತ್ತದೆಂಬ ಭರವಸೆಯನ್ನು ಶುದ್ಧೋದನರೊಂದಿಗೆ ಮುಕ್ತವಾಗಿ ಹಂಚಿಕೊಂಡೆ. ಆತ ಪಟ್ಟಕ್ಕೆ ಬಂದ ನಂತರ ಕಪಿಲವಸ್ತು ಪ್ರಾಂತ್ಯದ ಗಡಿಯನ್ನು ನೂರಾರು ಪಟ್ಟು ವಿಸ್ತರಿಸಿ ಇಡೀ ಭರತವರ್ಷಕ್ಕೇ ಮಹಾಚಕ್ರವರ್ತಿಯಾಗುತ್ತಾನೆಂಬ ಹಗಲುಗನಸು ಕಾಣುತ್ತಾ, ನನ್ನೊಳಗಿನ ಕುಡಿಗೂ ಪೌಷ್ಟಿಕವಾದ ಆಹಾರ ಒದಗಿಸುವ ಕಾಳಜಿ ವಹಿಸಿದೆ.

ನನ್ನ ಮಗ ಬೆಳೆದು ದೊಡ್ಡವನಾದಂತೆ, ಶುದ್ಧೋದನರೇ ಮುಂದೆ ನಿಂತು ಚಿನ್ನದ ಕಿರೀಟಧಾರಣೆಯೊಂದಿಗೆ ಪಟ್ಟಾಭಿಷೇಕ ಮಾಡಿದಂತೆ, ನಾನೇ ನನ್ನ ಕೈಯಾರೆ ಬಂಗಾರದ ಕಳಸದ ತುಂಬ ತುಂಬಿದ್ದ ಸುಂದರ ವರ್ಣದ ನೂರಾರು ಸುಗಂಧದ್ರವ್ಯಗಳನ್ನು, ಪುಷ್ಪವೃಷ್ಟಿಯನ್ನೂ ಸುರಿಸಿದಂತೆ ಭ್ರಮಿಸುತ್ತ ಮಂದಹಾಸ ಬೀರುತ್ತಲಿದ್ದೆ. ನನ್ನ ಮುಗುಳ್ನಗೆಗೆ ಕಾರಣವೇನೆಂದು ಸಖಿ ಮಾಳವಿಕಾ ಪದೇ ಪದೇ ಚುಡಾಯಿಸುತ್ತಿದ್ದಳು. ಅವಳಿಗೂ ನಾನು ಗರ್ಭಿಣಿಯಾಗಿರುವ ವಿಚಾರ ತಿಳಿದಿತ್ತಲ್ಲ. ಆಕೆಗೇ ಏನು, ಇಡೀ ಪ್ರಾಂತ್ಯಕ್ಕೇ ನನ್ನ ಕನಸಿನ ಕಲ್ಪನೆ ಪ್ರಚಾರವಾಗಿ ಎಲ್ಲರೂ ಹೊಸ ರಾಜಕುಮಾರನ ಆಗಮನದ ಸಿಹಿಸುದ್ದಿಗಾಗಿ ಕಾಯುತ್ತಿದ್ದರು. ಕನಸಿನ ಪ್ರಸಾರ ಎಂದಾಗ ನೆನಪಾಯಿತು, ನನಗೆ ಬಿದ್ದ ಕನಸು ಅನೇಕ ರೂಪಾಂತರಗಳನ್ನು ಪಡೆದು ಊರಲ್ಲೆಲ್ಲ ಹರಡಿತ್ತು. ನಾಲ್ಕು ಜನ ದೇವತೆಗಳು ಬಂದು ನನ್ನನ್ನು ಹಾಸಿಗೆ ಸಮೇತ ಎತ್ತಿಕೊಂಡು ಮಾನಸ ಸರೋವರದ ಬಳಿಗೆ ಕರೆದೊಯ್ದು, ಸ್ನಾನ ಮಾಡಿಸಿ, ನೂತನ ಪೋಷಾಕು ತೊಡಿಸಿ, ಪುಷ್ಪಾಲಂಕಾರಗಳಿಂದ ಸಿಂಗರಿಸಿ, ಸುಗಂಧ ದ್ರವ್ಯವನ್ನು ಪೂಸಿದರಂತೆ. ಸುಮೇಧನೆಂಬ ಬೋಧಿಸತ್ವ ಬಂದು ತಾನು ತನ್ನ ಅಂತಿಮ ಜನ್ಮವನ್ನು ನಿನ್ನ ಗರ್ಭದಲ್ಲಿ ಜನಿಸಲು ಬಯಸಿರುವೆ,

